**ಪೀಠಿಕ**

# ಯೇಸುವಿನ ಸಂತೈಸುವ ಮಾತುಗಳು

ಮತ್ತಾಯ, ಮಾರ್ಕ ಹಾಗೂ ಲೂಕನ ಸುವಾರ್ತೆಗಳಲ್ಲಿ ನೀಡದೆ ಇರುವ ಮಾಹಿತಿಯನ್ನು ಮತ್ತಾಯನು ತನ್ನ ಸುವಾರ್ತೆಯಲ್ಲಿ ತಿಳಿಸಿರುವನು (ಅಧ್ಯಾಯ 13-17). ಮೇಲುಪ್ಪರಿಗೆಯ ಕುರಿತು 5 ಅಧ್ಯಾಯಗಳಲ್ಲಿ ತಿಳಿಸಲಾಗಿದೆ. ಆರಂಭದ ಮೂರು ಸುವಾರ್ತೆಗಳು ಕರ್ತನ ಭೋಜನದ ಕುರಿತು ಮಾಹಿತಿಯನ್ನು ನೀಡಿದರೆ, ಯೋಹಾನನ ಸುವಾರ್ತೆಯಲ್ಲಿ, ಯೇಸು ತನ್ನ ಶಿಷ್ಯರನ್ನು ಕರೆದೊಯ್ದು ತನ್ನ ಮರಣ ಹಾಗೂ ಆರೋಹಣದ ಸಂದರ್ಭಕ್ಕಾಗಿ ಸಿದ್ಧಪಡಿಸುತ್ತಿದ್ದಾನೆ.

ಯೇಸು ತನ್ನ ಅಪೊಸ್ತಲರೊಂದಿಗೆ ಮಾತನಾಡುತ್ತಾ, ಅವರನ್ನು ಅನಾಥರನ್ನಾಗಿ ಅಥವಾ ಏಕಾಂಗಿಗಳನ್ನಾಗಿ ಬಿಡುವದಿಲ್ಲವೆಂದು ತಿಳಿಸುತ್ತಿದ್ದಾನೆ. ಅಧ್ಯಾಯ 14ರಲ್ಲಿ ಆತನು ಅವರಿಗಾಗಿ ಸ್ಥಳವನ್ನು ಸಿದ್ಧಮಾಡಲು ಹೋಗುತ್ತಿದ್ದು, ಅವರು ಸಹ ಅಲ್ಲಿಗೆ ಸೇರಲಿರುವರು ಎಂದು ತಿಳಿಸಿದ್ದಾನೆ. ಆ ಸಮಯದವರೆಗೂ, ಅವರು ಏನು ಬೇಡಿಕೊಂಡರೂ ಅದು ಅವರಿಗೆ ದೊರಕುವವು ಅಂದನು. ಅವುಗಳ ಸಂಗಡ ಪವಿತ್ರಾತ್ಮನು ತನ್ನ ಪ್ರಕಟನೆ, ಪ್ರಸನ್ನತೆ ಹಾಗೂ ಸಹಾಯವನ್ನು ನೀಡುವನು ಅಂದನು. ಆ ಸಹಾಯಕನು ಎಲ್ಲವನ್ನು ಅವರಿಗೆ ಉಪದೇಶಿಸುವನು ಎಂದು ತಿಳಿಸಿದನು. ನಂತರ ಯೇಸು, “ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ” (14:27) ಅಂದನು.

ಅಧ್ಯಾಯ 15ರಲ್ಲಿ ಆಶ್ಚರ್ಯವಾಗಿ ಮಾತನಾಡಿ, “ನೀವು ನನ್ನಲ್ಲಿ ನೆಲೆಗೊಂಡಿದ್ರೆ ನಾನು ನಿಮ್ಮಲ್ಲಿ ನೆಲೆಗೊಂಡಿರುವೆನು” ಅಂದನು (15:4). ದ್ರಾಕ್ಷೆಗಿಡಕ್ಕೂ ಅದರ ಬಳ್ಳಿಗೂ ಇರುವ ಸಂಬಂಧವನ್ನು ತಿಳಿಸಿದನು. ಹೌದು, ಯೇಸು ತನ್ನ ಅಪೊಸ್ತಲರನ್ನು ಒಂಟಿಯಾಗಿ ಬಿಟ್ಟು ಹೋಗಲಿಲ್ಲ. ದೇವರು ಅವರನ್ನು ಆಯ್ಕೆ ಮಾಡಿಕೊಂಡು, ಪರಸ್ಪರ ಪ್ರೀತಿಯ ಕುರಿತಾಗಿ ಮಾತನಾಡಿ, ಅವರ ಅನ್ಯೋನ್ಯತೆಯ ಬಗ್ಗೆ ತಿಳಿಸಿದನು.

ಅಧ್ಯಾಯ 16ರಲ್ಲಿ, “ನಾನು ಹೋಗುವದು ನಿಮಗೆ ಹಿತಕರವಾಗಿದೆ; ಹೇಗೆಂದರೆ ನಾನು ಹೋಗದಿದ್ದರೆ, ಆ ಸಹಾಯಕನು ನಿಮ್ಮ ಬಳಿಗೆ ಬರುವದಿಲ್ಲ” (16:7). ಮತ್ತು ನಾನು ಪುನಃ ನಿಮ್ಮನ್ನು ಸಂಧಿಸುವೆನು ಎಂದು ಆತನು ವಾಗ್ದಾನ ಮಾಡಿದನು: “ನೀವು ತಂದೆಯನ್ನು ಏನಾದರು ಬೇಡಿಕೊಂಡರೆ ಅದನ್ನು ಆತನು ನನ್ನ ಹೆಸರಿನಲ್ಲಿ ನಿಮಗೆ ನೀಡುವನು” ಎಂಬ ಮಾತು ಅಪೊಸ್ತಲರಿಗೆ (16:23ಬಿ) ವಿಶೇಷವಾದ ಸಂತೈಸುವಿಕೆಯನ್ನು ಉಂಟು ಮಾಡಿರಬೇಕಲ್ಲವೇ!

ಆತನು ಇನ್ನೂ ಮುಂದುವರೆಸಿ, “ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ಲೋಕದಲ್ಲಿ ನಿಮಗೆ ಸಂಕಟ ಉಂಟು. ಧೈರ್ಯವಾಗಿರಿ, ನಾನು ಲೋಕವನ್ನು ಜಯಸಿದ್ದೇನೆ ಎಂದು ಹೇಳಿದನು” (16:33). ಈ ವಿಧವಾದ ಭರವಸೆಯ ಮಾತುಗಳಿಂದ ಯೇಸು ಅವರನ್ನು ಸಂತೈಸಿದನು.

---

## ಯೇಸುವಿಗೆ ಸಂತೈಸುವಿಕೆಯು ಹೇಗೆ ಉಂಟಾಯಿತು?

ಯೇಸುವಿನ ಮಾತುಗಳಿಂದ ಆತನ ಅಪೊಸ್ತಲರಿಗೆ ಸಂತೈಸುವಿಕೆ ಉಂಟಾಗಿದ್ದರೂ, ಕ್ರೂಜೆಯ ಮರಣದ ಮೊದಲು, ಮಾನವನಾಗಿದ್ದ ಯೇಸುವಿಗೂ ಸಹ ಸಂತೈಸುವಿಕೆಯ ಅಗತ್ಯವಿತ್ತು. ಯೋಹಾನ 13-17 ರ ವಾಕ್ಯದಲ್ಲಿ, ಕತ್ತಲಗಳಿಗೆಯಲ್ಲಿದ್ದ ಯೇಸುವಿಗೆ ಆತ್ಮ ವಿಶ್ವಾಸ, ಭರವಸೆ ಹಾಗೂ ಸಂತೈಸುವಿಕೆ ಉಂಟಾಯಿತು ಎಂದು ಗಮನಿಸುತ್ತೇವೆ.

*ತಂದೆಯೊಂದಿಗಿದ್ದ ಸಂಬಂಧದ ನಿಮಿತ್ತ ಆತನಿಗೆ ಆತ್ಮ ವಿಶ್ವಾಸ ಉಂಟಾಯಿತು.* ಯೇಸು ತನ್ನ ಕೈಯಲ್ಲಿ ತಂದೆ ಎಲ್ಲವನ್ನು ಕೊಟ್ಟಿದ್ದಾನೆಂತಲೂ ತಾನು ದೇವರ ಬಳಿಯಿಂದ ಹೊರಟು ಬಂದಿದ್ದು ಮತ್ತೆ ದೇವರ ಬಳಿಗೆ ಹೋಗುತ್ತೇನೆಂತಲೂ ತಿಳುಕೊಂಡದ್ದರಿಂದ ಈ ಗಳಿಗೆಗೆ ಒಳಗಾದನು (13:3). ಆತನು ದೇವರ ಒಬ್ಬನೇ ಮಗನಾಗಿದ್ದನು. ಆತನು ದೇವರ ಬಳಿಯಿಂದ ಬಂದದ್ದರಿಂದ, ತಂದೆಯ ಬಳಿಗೆ ಹಿಂದಿರುಗುತ್ತಿದ್ದನು, ಅದು ನಿತ್ಯವಾದ ಸ್ಥಳವಾಗಿತ್ತು. ಯೋಹಾನ 17ರ ಆತನ ಪ್ರಾರ್ಥನೆಯಲ್ಲಿ ತಂದೆಯೊಂದಿಗಿನ ಸಂಬಂಧ ಹಾಗೂ ಅಧೀನತೆಯನ್ನು ಕಾಣುತ್ತೇವೆ.

*ತನ್ನ ಭವಿಷ್ಯವನ್ನು ಕುರಿತು ಯೋಚಿಸುವಾಗ ಆತನಿಗೆ ಸಂತೈಸುವಿಕೆ ಉಂಟಾಯಿತು.* ಆತನು ಶ್ರಮೆಯನ್ನು ಅನುಭವಿಸಿ ಪರಲೋಕದ ತಂದೆಯ ಬಳಿಗೆ ಹಿಂದಿರುಗುತ್ತಿದ್ದನು (14:2; 12, 28; 16:10, 28).

*ತನ್ನ ಅನುಯಾಯಿಗಳ ಕುರಿತು ಯೋಚಿಸಿದಾಗ ಆತನಿಗೆ ಸಂತೈಸುವಿಕೆ ಉಂಟಾಯಿತು.* ತಾನು ಅದುಕೊಂಡವರನ್ನು ಯೇಸು ಪ್ರೀತಿಸಿದನು. “ತನ್ನವರನ್ನು ಪ್ರೀತಿಸಿ, ಪರಿಪೂರ್ಣವಾಗಿ ಅವರನ್ನು ಪ್ರೀತಿಸುತ್ತಾ ಬಂದನು” (13:1).

ಸಂದಿಗ್ಧ ಪರಿಸ್ಥಿತಿಯಲ್ಲಿರುವಾಗ, ತಂದೆಯೊಂದಿಗಿನ ನಮ್ಮ ಸಂಬಂಧವನ್ನು ನೆನಪು ಮಾಡುವಾಗ ಕೃಪೆಯಿಂದ ದೊರಕುವ ನಿತ್ಯ ಭವಿಷ್ಯವನ್ನು ಕುಟುಂಬದ ಹಾಗೂ ಸಭೆಯೊಂದಿಗಿನ ಸಂಬಂಧವನ್ನು ನೆನಪು ಮಾಡುವಾಗ ಉಪಶಮನವಾಗುತ್ತದೆ.